**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಖಾನಾಪೂರ.**

**ಸಿ.ಸಿ ನಂ: 366/2021**

**PW- 2**
**CW-3**

ಹೆಸರು : ಸುರೇಶ ನಾನಾ ಪಾಟೀಲ

ವಯಸ್ಸು : **49** ವರ್ಷ

ಉದ್ಯೋಗ : ವ್ಯವಸಾಯ

ವಾಸ : ವಿಜಯ ನಗರ ಹಿಂಡಲಗಾ

ದಿನಾಂಕ **19-09-2022** ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಎ.ಪಿ.ಪಿ ಅವರಿಂದ.**

ಸಾಕ್ಷಿದಾರರಿಗೆ ಈಗ ನಿಪಿ-2 ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 5-6 ವರ್ಷದ ಹಿಂದೆ ಅಬಕಾರಿ ಕಛೇರಿಯಲ್ಲಿ ಪೋಲಿಸರ ಕೋರಿಕೆ ಮೇರೆಗೆ ಮಾಡಿದ್ದೆ. ನಿಪಿ-2 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಲ್ಲ.

***(ಸಾಕ್ಷಿಯು ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)***

**ಪಾಟೀ ಸವಾಲುಃ ಸಸಅ ರವರಿಂದ**

ದಿನಾಂಕ 26-09-2020 ರಂದು ಚಾಸಾ 1 ರವರು ನನ್ನನ್ನು ಹಾಗೂ ಚಾಸಾ 2 ರವರನ್ನು ಠಾಣೆಗೆ ಕರೆಯಿಸಿ ತಮಗೆ ಬಂದ ಮಾಹಿತಿಯನ್ನು ತಿಳಿಸಿ ತಾವು ಮಾಡುವ ದಾಳಿಗೆ ಪಂಚರಾಗಬೇಕೆಂದು ಕೋರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಒಪ್ಪಿಕೊಂಡ ಮೇರೆಗೆ ನಮ್ಮನ್ನು ಪಂಚರಾಗಿ ಕಣಕುಂಬಿ ಡೆಲ್ಟಾ ಹೋಟೇಲ ಬಳಿ ರಸ್ತೆಗಾವಲು ಮಾಡುತ್ತಿದ್ದಾಗ ಆರೋಪಿತರು ತನ್ನ ಬಳಿ ಎರಡು ಗೋಣಿ ಚೀಲದಲ್ಲಿ ಎರಡು ಲೀಟರನಷ್ಟು ಸುಮಾರು 40 ರಾಯಲ ಚಾಲೆಂಜ ವಿಸ್ಕಿಯ ಬಾಟಲಿಗಳು ಸಿಕ್ಕಿರುತ್ತವೆ

ಎಂದರೆ ಸರಿಯಲ್ಲ. ಚಾಸಾ 1 ರವರು ನಮ್ಮ ಸಮಕ್ಷಮ ಸದರಿ ಮದ್ಯದ ಮಾದರಿಗಳಿಂದ ಒಂದು ಬಾಟಲಿಯನ್ನು ರಾಸಾಯನಿಕ ಪರೀಕ್ಷಾ ವರದಿಗಾಗಿ ಪ್ರತ್ಯೇಕವಾಗಿ ಸೀಲು ಮಾಡಿ ನಮ್ಮಗಳ ಸಹಿ ಇರುವ ಚೀಟಿ ಅಂಟಿಸಿದ್ದರು ಎಂದರೆ ಸರಿಯಲ್ಲ. ಅನಂತರ ನಮ್ಮ ಸಮಕ್ಷಮ ನಿಪಿ-2 ರಂತೆ ಮಹಜರ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲ ವಿಷಯ ತಿಳಿದುಕೊಂಡು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲ ವಿಷಯ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

**ಪ್ರಧಾನ ದೀವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.**

**ಸಿ.ಸಿ ನಂ: 366/2021**

**PW- 1**
**CW-1**

ಹೆಸರು : ರವೀಂದ್ರ ಬಿ ಹೊಸಳ್ಳಿ

ವಯಸ್ಸು : **50** ವರ್ಷ

ಉದ್ಯೋಗ : ಅಬಕಾರಿ ನಿರೀಕ್ಷಕರು

ವಾಸ : ಅಬಕಾರಿ ಉಪ ಆಯುಕ್ತರ ಕಛೇರಿ ಬೆಳಗಾವಿ

ದಿನಾಂಕ **19-09-2022** ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಎ.ಪಿ.ಪಿ ಅವರಿಂದ.**

ನಾನು ಜೂನ 2020 ರಿಂದ ಇಲ್ಲಿಯವರೆಗೆ ಅಬಕಾರಿ ಉಪ ಆಯುಕ್ತಕರ ಕಛೇರಿ ಬೆಳಗಾವಿಯಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ಮಾಡಿರುತ್ತೇನೆ.

ದಿನಾಂಕ 26-09-2020 ರಂದು ನಾನು ನಮ್ಮ ಇಲಾಖಾ ಸಿಬ್ಬಂದಿ ಹಾಗೂ ಪಂಚರ ಜೊತೆ ಗೋವಾ ರಾಜ್ಯದಿಂದ ಅಕ್ರಮವಾಗಿ ಮದ್ಯ ಸಾಗಾಟವನ್ನು ಇಡೇಗಟ್ಟಲು ರಸ್ತೆಗಾವಲು ಮಾಡಲು ಬೆಳಿಗ್ಗೆ 5.00 ಗಂಟೆಗೆ ಹೊರಟು ಖಾನಾಪೂರ ತಾಲೂಕಿನ ಕಣಕುಂಬಿ ಗ್ರಾಮದ ಬಳಿ ತಲುಪಿ, ಕಣಕುಂಬಿಯ ಡೆಲ್ಟಾ ಹೊಟೇಲ ಹತ್ತಿರ ಹೋದಾಗ ಅಲ್ಲಿ ಒಬ್ಬ ವ್ಯಕ್ತಿ ಎರಡುಗ ಗೋಣಿ ಚೀಲಗಳನ್ನು ಇಟ್ಟುಕೊಂಡು ನಿಂತಿದ್ದು, ಸದರಿ ವ್ಯಕ್ತಿಯ ಹತ್ತಿರ ಹೋಗಿ ಚೀಲದಲ್ಲಿ ಏನು ಇದೆ ಎಂದು ವಿಚಾರಿಸಿದಾಗ ಆತನು ಗೋಣಿ ಚೀಲದಲ್ಲಿ ಗೋವಾ ರಾಜ್ಯದಲ್ಲಿ ತಯಾರಾದ ಮದ್ಯ ಇರುತ್ತದೆ ಎಂದು ತಿಳಿಸಿದ್ದು, ಸದರಿ ಮದ್ಯವನ್ನು ಸಾಗಾಟ ಮಾಡಲು ಪರವಾನಿಗೆ ಬಗ್ಗೆ ವಿಚಾರಿಸಿದಾಗ ಸದರಿ ವ್ಯಕ್ತಿ ಪರವಾನಿಗೆ ಇಲ್ಲ ಎಂದು ತಿಳಿಸಿದ್ದು, ನಂತರ ಸದರಿ ಗೋಣಿ ಚೀಲವನ್ನು ನೋಡಿದಾಗ ಅದರಲ್ಲಿ 2 ಲೀಟರನ 40 ರಾಯಲ ಚಾಲೆಂಜ ವಿಸ್ಕಿಯ ಬಾಟಲಿಗಳು ಇರುವುದು ಕಂಡು ಬಂತು. ಯಾವುದೇ ಪರವಾನಿಗೆ ಇಲ್ಲದೇ ಮದ್ಯವನ್ನು ಸಾಗಾಟ ಮಾಡುವುದು ಅಕ್ರಮವಾಗಿರುವುದರಿಂದ ಸದರಿ ವ್ಯಕ್ತಿ ಹಾಗೂ ಮುದ್ದೆಮಾಲನ್ನು ನನ್ನ ವಶಕ್ಕೆ ಪಡೆದೆ. ಅಗ ಸಮಯ 5.45 ಆಗಿತ್ತು. ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಿದಾಗ ಆ ವ್ಯಕ್ತಿ ತನ್ನ ಹೆಸರು ರಮೇಶ

ಮಂದ್ರತ್ತಿ, 45 ವರ್ಷ, ಶಾಂತಿ ನಗರ, ಮೇಡಕಾ ಜಿಲ್ಲೆ ತೆಲಂಗಾಣ ಎಂದು ತಿಳಿಸಿದ್ದು, ನಂತರ ರಾಸಾಯನಿಕ ಪರೀಕ್ಷೆಗಾಗಿ 2 ಲೀಟರನ ಒಂದು ರಾಯಲ ಸ್ಟಾಗ ವಿಸ್ಕಿಯ ಕ್ಯಾನನ್ನು ಪ್ರತ್ಯೇಕವಾಗಿ ತೆಗೆದು ಸೀಲು ಮಾಡಿ, ನನ್ನ ಹಾಗೂ ಪಂಚರ ಸಹಿ ಉಳ್ಳ ಚೀಟಿಯನ್ನು ಅಂಟಿಸಿದೆನು. ನಂತರ ಮಾದರಿ ಸೀಲ ಪತ್ರವನ್ನು ತಯಾರಿಸಿದೆನು. ಪಂಚನಾಮೆಯನ್ನು 6.00 ಗಂಟೆಯಿಂದ 6.45 ರವರಿರೆಗೆ ಪಂಚನಾಮೆಯನ್ನು ಜರುಗಿಸಿ, ನಂತರ ಕಚೇರಿಗೆ ವಾಪಸಾಗಿದ್ದು ಈ ಬಗ್ಗೆ ಸರ್ಕಾರಿದ ಪರವಾಗಿ ಸ್ವ ಪಿರ್ಯಾದನ್ನು ಆರೋಪಿಯ ವಿರುದ್ದ ಪ್ರಕರಣವನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಪ್ರ. ವ ವರನ್ನು ನಿವೇದಿಸಿಕೊಂಡೆ. ಆರೋಪಿಯ ವಿರುದ್ದ ದಸ್ತಗಿರಿ ಕ್ರಮ ಜರುಗಿಸಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ.

ಸಾಕ್ಷಿಯು ತಾನು ದಾಖಲಿಸಿದ ಸ್ವ ಪಿರ್ಯಾದನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸ್ವ ಪಿರ್ಯಾದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾವೆಯನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ರಾಸಾಯನಿಕ ಪರೀಕ್ಷೆಗೆ ತೆಗೆದ ಬಾಟಲಿಯನ್ನು ನೋಡಿ ಗುರುತಿಸಿದ್ದು ಅದನ್ನು ಎಂ.ಒ 1 ಎಂದು, ಸಾಕ್ಷಿಯ ಸಹಿಯನ್ನು ಎಂ.ಒ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ದಾಖಲಿಸಿದ ಪ್ರ.ವ ವನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪ್ರ. ವ ವನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (ಈ ದಿನ ಆರೋಪಿಯು ಗೈರು ಹಾಜರಿದ್ದು ಆರೋಪಿಯನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂಬ ಶರತ್ತಿನ ಮೇರೆಗೆ ಅರ್ಜಿಯನ್ನು ಪುರಸ್ಕರಿಸಲಾಗಿದೆ.)

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಿ ಎಸ ಹೆಚ ವಕೀಲರಿಂದ**

ನಮ್ಮ ಇಲಾಖೆಗೆ ಸಾಮಾನ್ಯವಾಗಿ ಕ್ರೈಮ ಮೀಟಿಂಗ ಇರುತ್ತವೆ ಎಂದರೆ ನಿಜ. ಸದರಿ ಮೀಟಿಂಗನಲ್ಲಿ ಪ್ರತಿ ತಿಂಗಳು ನಾವು ದಾಖಲಿಸಿರುವ ಕೇಸುಗಳ ಬಗ್ಗೆ ತನಿಖೆಯ ಪ್ರಗತಿಯ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಾರೆ ಎಂದರೆ ನಿಜ ಹಾಗೂ ಎಷ್ಟು ಪ್ರಕರಣಗಳನ್ನು ದಾಖಲಿಸಿದ್ದೇವೆ ಎಂದು ಮಾಹಿತಿ

ಪಡೆಯುತ್ತಾರೆ ಎಂದರೆ ನಿಜ. 2020-21 ನೇ ಸಾಲಿನಲ್ಲಿ ಕೋವಿಡ ಸಾಂಕ್ರಾಮಿಕ ರೋಗ ದೇಶದಾದ್ಯಂತ ಹರಡಿದ್ದು, ಈ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಲಾಕಡೌನ ಘೋಷಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 2020-21 ನೇ ಸಾಲಿನಲ್ಲಿ ಲಾಕಡೌನ ಘೋಷಿಸದ ಬಗ್ಗೆ ನನಗೆ ಮಾಹಿತಿ ಇತ್ತು ಆದರೆ ನಾವು ದಾಳಿ ಮಾಡಿದ ಸಮಯದಲ್ಲಿ ಲಾಕಡೌನ ಇರಲಿಲ್ಲ. ಮಾರ್ಚ 2021 ನೇ ಮಾಹೆಯಿಂದ ಕರ್ನಾಟಕ ಸರ್ಕಾರವು ಲಾಕಡೌನ ಘೋಷಿಸಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ನಾನು ಸರ್ಕಾರಿ ಅಧಿಕಾರಿಯಾಗಿದ್ದು, ನನಗೆ ಈ ಬಗ್ಗೆ ಮಾಹಿತಿ ಎದ್ದು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರ್ನಾಟಕ ಸರ್ಕಾರಿ ಲಾಕಡೌನ ಘೋಷಿಸಿದ ಮಾದರಿಯಲ್ಲಿಯೇ ಗೋವಾ ರಾಜ್ಯ ಸರ್ಕಾರವು ಸಹ ಲಾಕಡೌನ ಘೋಷಿಸಿತ್ತು ಎಂದರೆನಿಜ. ಸದರಿ ಸ್ಥಳದಲ್ಲಿ ಅಕ್ರಮವಾಗಿ ಸಾಗಾಟ ಮಾಡುತ್ತಿರುವ ಬಗ್ಗೆ ಗೊತ್ತಿತ್ತು ಆದರೆ ಮಾಹಿತಿ ಬಂದಿರಲಿಲ್ಲ. ನನಗೆ ವಿಷಯ ಗೊತಿತದ್ದ ಬಗ್ಗೆ ನನ್ನ ಸ್ವ ಪಿರ್ಯಾದಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನನ್ನ ಪಿರ್ಯಾದಿನಲ್ಲಿ ನಮೂದಿಸಲು ತೊಂದರೆ ಇರಲಿಲ್ಲ.

ನಮಗೆ ಕಛೇರಿಯಲ್ಲಿ ಕರ್ತವ್ಯದ ಅವಧಿ ಇರುವುದಿಲ್ಲ 24 ಗಂಟೆ ಮಾಹಿತಿ ಬಂದಾಗ ಕರ್ತವ್ಯ ನಿರ್ವಹಿಸುತ್ತೇವೆ. ನಮಗೆ ಸಾಮಾನ್ಯವಾಗಿ ಕರ್ತವ್ಯದ ಅವಧಿ ನಿಗದಿಪಡಿಸಿರುವುದಿಲ್ಲ. ನಮ್ಮ ಕಛೇರಿಯಿಂದ ಹೋರಗಡೆ ಹೋಗಬೇಕಾದರೆ ಕಛೇರಿಯ ಪುಸ್ತಕದಲ್ಲಿ ಆ ಬಗ್ಗೆ ನಮೂದಿಸಿರುತ್ತೇವೆ ಎಂದರೆ ನಿಜ. ಆದಿನ ಬೆಳಿಗ್ಗೆ 4.00 ಗಂಟೆಗೆ ರಸ್ತೆ ಗಾವಲಿಗೆ ಹೋಗಬೇಕಾದರೆ ನಮ್ಮ ಕಛೇರಿಯ ಪುಸ್ತಕದಲ್ಲಿ ಸಹಿ ಮಾಡಿರುತ್ತೇನೆ. ಸದರಿ ಪುಸ್ತಕವನ್ನು ನಾನು ಹಾಜರು ಪಡಿಸಿರುವುದಿಲ್ಲ. ಅದನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸದರಿ ಕಛೇರಿ ಪುಸ್ತಕವನ್ನು ಹಾಜರು ಪಡಿಸಿದರೆ ಸತ್ಯ ಸಂಗತಿ ಹೊರಬರುತ್ತದೆ ಎಂದು ಉದ್ದೇಶಪೂರಕವಾಗಿ ಸದರಿ ಪುಸ್ತಕವನ್ನು ಹಾಜರು ಪಡಿಸಿಲ್ಲ ಎಂದೆರ ಸರಿಯಲ್ಲ.

ಆ ದಿನ ನಾನು ಕಛೇರಿಯನ್ನು ಬೆಳಿಗ್ಗೆ 4.00 ಗಂಟೆಗೆ ಬಿಟ್ಟಿದ್ದು, ನನ್ನ ಜೊತೆ ಇಬ್ಬರು ಪಂಚರು ಹಾಗೂ ನಮ್ಮ ಇಲಾಖಾ ಸಿಬ್ಬಂದಿಗಳು ಇದ್ದರು. ಪಂಚರಿಗೆ ನಮ್ಮ ಜೊತೆ ಬರಲು ಯಾವುದೇ ನೋಟಿಸ ನೀಡಿಲ್ಲ. ನಮ್ಮ ಇಲಾಖಾ ಸಿಬ್ಬಂದಿ ಪಂಚರನ್ನು ಕರೆದುಕೊಂಡು ಬಂದಿದ್ದು, ಈಗ ಅವರ ಹೆಸರನ್ನು ಹೇಳಲು ನೆನಪಿಲ್ಲ. ಸಾಕ್ಷಿದಾರರ ಮಂದುವರೆದು ಫೋನ ಮೂಲಕ ಪಂಚರಿಗೆ ಕಛೇರಿಗೆ ಕರೆಸಿಕೊಂಡಿರುತ್ತೇನೆ. ಚಾಸಾ 2 ಮತ್ತು 3 ನಮ್ಮ ಇಲಾಖಾ ಪಂಚರಾಗಿರುವುದಿಲ್ಲ. ಸದರಿಯವರ ಫೋನ ನಂಬರ ನನಗೆ ಹೇಗೆ ಸಿಕ್ಕಿರುತ್ತದೆ ನನಗೆ ಹೇಳಲು ಆಗುವುದಿಲ್ಲ. ಸದರಿಯವರ ಫೋನ ನಂಬರ ಚಾಸಾ 4 ರವರಿಗೆ ಗೊತ್ತಿತ್ತು.

ಪಂಚರಿಗೆ ಯಾವಾಗ ಫೋನ ಮಾಡಲಾಗಿತ್ತು ನನಗೆ ಗೊತ್ತಿಲ್ಲ. ಪಂಚರು ಬೆಳಗಾವಿಯಲ್ಲಿ ನಮ್ಮ ಕಛೇರಿಯ ಸಮೀಪದಲ್ಲಿ ವಾಸವಾಗಿರುತ್ತಾರೆ, ನಿರ್ದಿಷ್ಟವಾಗಿ ಎಲ್ಲಿ ವಾಸವಾಗಿರುತ್ತಾರೆ ನನಗೆ ಗೊತ್ತಿಲ್ಲ. ಪಂಚರು 4.00 ಗಂಟೆಗೆ ಮೊದಲು ನಮ್ಮ ಕಛೇರಿಗೆ ಬಂದಿರುತ್ತಾರೆ. ನಿರ್ದಿಷ್ಟವಾಗಿ ಯಾವ ಸಮಯದಲ್ಲಿ ಬಂದರು ಹೇಳಲು ಆಗುವುದಿಲ್ಲ.  ಪಂಚರಿಗೆ ಕೋವಿಡ ಟೇಸ್ಟ ಮಾಡಿಸಿರುವುದಿಲ್ಲ. ಘಟನಾ ಸ್ಥಳದಲ್ಲಿ ಹೋಗುವಾಗ ರಸ್ತೆಯಲ್ಲಿ ವಾಹನಗಳು ವಿರಳವಾಗಿ ಓಡಾಡುತ್ತಿದ್ದವು. ಅಂದಾಜಾಗಿ ಎಷ್ಟು ವಾಹನಗಳು ಹೋಗಿರುತ್ತವೆ ಹೇಳಲು ಆಗುವುದಿಲ್ಲ.

ನಾವು ದಾಳಿ ಮಾಡಿದ ಸ್ಥಳಕ್ಕೆ ಬೆಳಿಗ್ಗೆ 5.30 ಕ್ಕೆ ಹೋಗಿ ತಲುಪಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಆರೋಪಿಯು ಸದರಿ ಸ್ಥಳದಲ್ಲಿ ನಿಂತಿದ್ದರು.  ಆರೋಪಿಯು ರಸ್ತೆಯ ಎಡಬದಿಯಲ್ಲಿ ನಿಂತಿದ್ದರು. ಆ ಸ್ಥಳದಲ್ಲಿ ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಆರೋಪಿಯ ಬಳಿ ಯಾವುದೇ ವಾಹನ ಇರಲಿಲ್ಲ. ಆರೋಪಿಯು ಆ ದಿನ ಯಾವ ಬಟ್ಟೆ ಹಾಕಿದ್ದ ಎಂದು ಈಗ ಹೇಳಲು ಆಗುವುದಿಲ್ಲ. ಆರೋಪಿಯ ಹತ್ತಿರವೇ ನಮ್ಮ ಇಲಾಖಾ ಜೀಪನ್ನು ನಿಲ್ಲಿಸಿರುತ್ತೇವೆ. ನನ್ನ ದೂರಿನಲ್ಲಿ ಈ ಬಗ್ಗೆ ನಮೂದಿಸಿರುವುದಿಲ್ಲ, ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ಪಂಚನಾಮೆಯನ್ನು ನಮ್ಮ ಇಲಾಖಾ ಸಿಬ್ಬಂದಿ ಬರೆದಿರುತ್ತಾರೆ. ನಮ್ಮನ್ನು ನೋಡಿ ಆರೋಪಿ ಓಡಿ ಹೋಗಲು ಪ್ರಯತ್ನಿಸಿರುವುದಿಲ್ಲ. ಆ ದಿನ ಸಿಕ್ಕ 40 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳಹಿಸಿಲ್ಲ, ಕೇವಲ ಒಂದು ಬಾಟಲಿಯನ್ನು ಕಳುಹಿಸಿರುತ್ತೇನೆ. ಆದ್ದರಿಂದ ಉಳಿದ ಬಾಟಲಿಗಳಲ್ಲಿ ಏನು ಇತ್ತು ಎಂದು ಹೇಳಲು ಆಗುವುದಿಲ್ಲ ಎಂದರೆ ನಿಜ. ಆ ದಿನ ಒಟ್ಟು ಎರಡು ಗೋಣಿ ಚೀಲಗಳು ಇದ್ದು, ಎರಡನ್ನೂ ಜಪ್ತು ಮಾಡಿರುತ್ತೇನೆ. ಸದರಿ ಗೋಣಿ ಚೀಲಗಳನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಅದನ್ನು ನಮ್ಮ ಡಿಸಿ ಅವರಿಗೆ ಹಸ್ತಾತಂರಿಸಿರುತ್ತೇನೆ. ಸದರಿ ಗೋಣಿ ಚೀಲಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ, ಅವುಗಳನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ದಿಂನಾಂಕ 26-09-2020 ರಂದು ರಸ್ತೆಗಾವಲು ಮಾಡಲು ಖಾನಾಪೂರದ ಕಣಕುಂಬಿಯ ಡೆಲ್ಟಾ ಢಾಬಾ ಬಳಿ ಹೋಗಿದ್ದು ಅಲ್ಲಿ ಆರೋಪಿಯು ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಎರಡು ಗೋಣಿ ಚೀಲಗಳಲ್ಲಿ 40 ಗೋವಾ ರಾಜ್ಯದಲ್ಲಿ ಮಾತ್ರ ಮಾರಾಟಕ್ಕಿರುವ ರಾಯಲ ವಿಸ್ಕಿಯ ಬಾಟಲಿಗಳನ್ನು ಸ್ವಾಧೀನ ಹೊಂದಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಡೆಲ್ಟಾ ಢಾಬಾ ಕಣಕುಂಬಿಯಿಂದ

ಸುಮಾರು 3-4 ಕೀ.ಮಿ ಅಂತರದಲ್ಲಿದೆ. ಸದರಿ ಧಾಬಾ ಮುಚ್ಚಿದ್ದು ಯಾವುದೇ ವ್ಯಕ್ತಿಗಳು ಇರಲಿಲ್ಲ. ಪಂಚನಾಮೆ ಮಾಡಿದ ಜಾಗದ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ನಾನು ದಾಳಿ ಮಾಡಿದ ದಿನಾಂಕದಂದು ಲಾಕಡೌನ ಘೋಷಣೆ ಆಗಿದ್ದು ಯಾರೂ ಸಹ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಓಡಾಡುವುದು ನಿಶೇಧಿಸಲಾಗಿತ್ತು ಎಂದರೆ ಸರಿಯಲ್ಲ. ಆರೋಪಿಗೂ ಪ್ರಸ್ತುತ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಎಂ.1 ಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖಾ ಅಂಕಿ ಅಂಶಕ್ಕಾಗಿ ಆರೋಪಿಯು ಯಾವುದೇ ತಪ್ಪುಮಾದಿದ್ದರೂ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಗೋವಾ ರಾಜ್ಯದ ಗಡಿಯಲ್ಲೂ ಸಹ ಸದರಿ ರಾಜ್ಯದ ತನಿಖಾ ಠಾಣೆ ಇದ್ದು, ಸದರಿಯವರು ಎಲ್ಲ ವ್ಯಕ್ತಿಗಳನ್ನು ಪರಿಶೀಲನೆ ಮಾಡಿ ಬಿಡುತ್ತಾರೆ ಎಂದರೆ ಸರಿಯಲ್ಲ. ಮಾರ್ಗ ಬದಲಿಸಿ ರಾಜ್ಯಕ್ಕೆ ಪ್ರವೇಶಿಸುತ್ತಾರೆ ಎಂದು ಉತ್ತರಿಸಿರುತ್ತಾರೆ. ತನಿಖಾ ಠಾಣೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ರಾಜ್ಯದ ಗಡಿಯಲ್ಲಿ ಎರಡೂ ಕಡೆಯೂ ತನಿಖಾ ಠಾಣೆ ಇದ್ದು ಸದರಿ ತನಿಖಾ ಠಾಣೆಗಳಲ್ಲಿ ಎಲ್ಲ ವ್ಯಕ್ತಿಗಳನ್ನು ಪರಿಶೀಲಿಸಿ ಬಿಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ತನಿಖಾ ಠಾಣೆಯ ಸಿಬ್ಬಂದಿಗಳ ಕಣ್ಣು ತಪ್ಪಿಸಿ ಯಾವುದೇ ವ್ಯಕ್ತಿ ಸುಮಾರು 80 ಲಿಟರ ಮದ್ಯವನ್ನು ಗೋಣಿ ಚೀಲದಲ್ಲಿ ಸಾಗಾಟ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಒಬ್ಬ ವ್ಯಕ್ತಿ 80 ಲೀಟರ ಮದ್ಯವನ್ನು ರಸ್ತೆ ಬದಿಯಲ್ಲಿ ಇಟ್ಟುಕೊಂಡು ನಿಂತುಕೊಳ್ಳಲು ಸಾಧ್ಯ ಇಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿಯು ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಯಾರಿಸಿದ ಶೋಧನಾ ಸಮುಚಿತ ವರದಿಯಲ್ಲಿ ನನಗೆ ವರ್ತಮಾನವು ಅರ್ಧ ಗಂಟೆ ಮೊಲೇ ದೂರತಿರುವುದು ನಮೂದಿಸಿರುತ್ತೇನೆ ಎಂದರೆ ನಿಜ. ಈ ಬಗ್ಗೆ ನನ್ನ ಪಿರ್ಯಾದಿನಲ್ಲಿ ಹಾಗೂ ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಮೂದು ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.